ಡನ್ನೋನ ಸಾಹಸ ಕಥೆಗಳು

10

ನಿಕೋಲಾಯ್ ನೋಸೊವ್



ಬಲೂನು ಅಪಘಾತ



RADUGA PUBLISHERS



ಡನ್ನೋನ ಸಾಹಸ ಕಥೆಗಳು


ನಿಕೋಲಾಯ್ ನೋಸೊವ್ 10

ಬಲೂನು ಅಪಘಾತ

ಚಿತ್ರಗಳು: ಬೋರಿಸ್ ಕಲೌಶಿನ್

ಕನ್ನಡಕ್ಕೆ ಪ್ರಭಾಕರ ನಾನಾವಟಿ







ಕೆಲವರು ನೀವು ಎಷ್ಟು ಮೇಲೆ ಹೆಚ್ಚು ಎತ್ತರಕ್ಕೆ ಹೋದಷ್ಟೂ ಹವೆ ಬೆಚ್ಚಗಿರುತ್ತದೆ ಎಂದು ಭಾವಿಸುತ್ತಾರೆ. ಅದು ಸತ್ಯವಲ್ಲ. ನೀವು ಎಷ್ಟು ಎತ್ತರಕ್ಕೆ ಹೋದಷ್ಟೂ ಚಳಿ ಹೆಚ್ಚಾಗುತ್ತದೆ . ಏಕೆಂದರೆ ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ಬಿಸಿಮಾಡುತ್ತಾನೆ. ಭೂಮಿಯು ಒಲೆಯಂತಾಗುತ್ತದೆ, ಮತ್ತು ಒಲೆಯ ಹತ್ತಿರ ನೀವು ಎಷ್ಟು ಇರುತ್ತೀರೋ ಅಷ್ಟು ಬೆಚ್ಚಗಿರುತ್ತದೆ ಎಂಬುದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಮೈಟ್ಸ್‌ಗಳು ತಮ್ಮ ಬಲೂನಿನಲ್ಲಿ ಭೂಮಿಯಿಂದ ಮೇಲಕ್ಕೆ ಹಾರಿದಾಗ ಇದನ್ನು ತಾವೇ ಕಂಡುಕೊಂಡರು. ಮೋಡಗಳ ಮೇಲ್ಭಾಗದಲ್ಲಿ ಭಯಂಕರ ಚಳಿಯಿತ್ತು; ಅವರ ಕೆನ್ನೆಗಳು ಮತ್ತು ಮೂಗುಗಳು ಕೆಂಪಾದವು. ಬೆಚ್ಚಗಿರಲು ಅವರು ಕಾಲುಗಳನ್ನು ನೆಲಕ್ಕೆ ಬಡಿದುಕೊಳ್ಳುತ್ತಾ, ಕೈಗಳನ್ನು ಬೀಸುತ್ತಾ ಇರಬೇಕಾಯಿತು. ಎಲ್ಲರಿಗಿಂತ ಸ್ಕ್ಯಾಟರ್‌ಬ್ರೇನ್ ನಿಗೆ ಹೆಚ್ಚು ಚಳಿಯಾಗಿತ್ತು, ಏಕೆಂದರೆ ಅವನು ತನ್ನ ಟೊಪ್ಪಿಗೆಯನ್ನು ತರುವದು ಮರೆತಿದ್ದನು. ಅವನ ಮೈ ಎಲ್ಲ ನಡುಗುತ್ತಿತ್ತು, ಅವನ ಹಲ್ಲುಗಳು ಕಟಕಟಿಸುತ್ತಿದ್ದವು, ಮತ್ತು ಅವನ ಮೂಗಿನ ತುದಿಯಲ್ಲಿ ಒಂದು ದೊಡ್ಡ ಹಿಮದ ತುಂಡು ಕಾಣಿಸುತ್ತಿತ್ತು. "ಹಲ್ಲು ಕಟಕಟಿಸುವುದನ್ನು ನಿಲ್ಲಿಸು," ಎಂದು ಗ್ರಂಪ್ಸ್ ಗೊಣಗಿದನು. “ನಿನ್ನ ಹಲ್ಲುಗಳ ಕಟಕಟಿಸುವ ಶಬ್ದವನ್ನೂ ಕೇಳಬೇಕಾಗಿಲ್ಲ.ಈಗಾಗಲೇ ಸಾಕಷ್ಟು ಚಳಿಯಾಗಿದೆ!”

"ಚಳಿ ಇರುವುದು ನನ್ನ ತಪ್ಪೇನಲ್ಲ! “ಎಂದು ಸ್ಕ್ಯಾಟರ್‌ಬ್ರೇನ್ ನಡುಗುತ್ತಾ ಹೇಳಿದನು.

“ತುಂ...ಬಾ ಚ ಳಿ !”

"ಹಲ್ಲುಗಳು ಕಟಕಟಿಸುವ ಶಬ್ದವನ್ನು ಕೇಳುವುದನ್ನು ನಾನು ಸಹಿಸಲಾರೆ," ಎಂದು ಕ್ರಂಪ್ಸ್ ಎದ್ದು ನಿಂತು ಹೇಳಿದನು. "ಅದು ನನಗೆ ಮತ್ತಷ್ಟು ಚಳಿ ಹುಟ್ಟಿಸುತ್ತದೆ."

ಅವನು ಬ್ಲಾಬ್ಸ್‌ನ ಪಕ್ಕದಲ್ಲಿ ಕುಳಿತನು, ಆದರೆ ಬ್ಲಾಬ್ಸ್‌ನ ಹಲ್ಲುಗಳೂ ಕೂಡ ಕಟಕಟಿಸುತ್ತಿದ್ದವು. ಕ್ರಂಪ್ಸ್ ಅವನನ್ನು ಅನುಮಾನದಿಂದ ನೋಡಿದನು.

"ನೀನೂ ಹಾಗೇ ಮಾಡುತ್ತಿದ್ದೀಯಾ?" ಎಂದು ಅವನು ಕೇಳಿದನು. "ನನ್ನನ್ನು ಕಿರಿಕಿರಿಗೊಳಿಸಲೆಂದೇ, ಅಲ್ಲವೇ?"

"ಇಲ್ಲಪ್ಪ. ತುಂಬಾ ಚ ಳಿ!"

ಕ್ರಂಪ್ಸ್ ಎದ್ದು ಮತ್ತೊಂದು ಆಸನವನ್ನು ಹುಡುಕಿಕೊಂಡನು. ಅವನು ಸದಾ ತನ್ನ ಆಸನವನ್ನು ಬದಲಾಯಿಸುತ್ತಲೇ ಇದ್ದನು. ಮತ್ತು ಎಲ್ಲರಿಗೂ ಅವನು ಒಂದು ಕಿರಿಕಿರಿಯವನಾಗಿ ಕಂಡನು.

ಬಲೂನಿನ ಮೇಲೆ ಹಿಮದ ಪದರು ಆವರಿಸಿಕೊಂಡಿತ್ತು. ಸೂರ್ಯನ ಬೆಳಕಿನಲ್ಲಿ ಅದು ಬೆಳ್ಳಿಯಂತೆ ಹೊಳೆಯುತ್ತಿತ್ತು.

ಕ್ರಮೇಣ ಒಳಗಿನ ಗಾಳಿ ತಣ್ಣಗಾಗತೊಡಗಿತು. ಬಲೂನು ಕೆಳಕ್ಕೆ ಇಳಿಯಲು ಆರಂಭಿಸಿತು. ಒಂದು ನಿಮಿಷದಲ್ಲೇ ಅದು ಗಾಳಿಯಿಂದಾಗಿ ವೇಗದಿಂದ ಕೆಳಗೆ ಬೀಳತೊಡಗಿತು. ಇನ್ನೂ ಒಂದೂ ಮರಳಿನ ಚೀಲಗಳು ಉಳಿದಿರಲಿಲ್ಲ. ಬಲೂನಿನ ಕೆಳಬೀಳುವಿಕೆಯನ್ನು ನಿಲ್ಲಿಸಲು ಏನೂ ಮಾಡಲು ಸಾಧ್ಯವಾಗಲಿಲ್ಲ.

"ಸ ಹಾ ಯ!" ಎಂದು ಟ್ರಿಕ್ಲಿಸ್ವೀಟರ್ ಕಿರುಚಿದನು.

"ನಾವು ಮುಗಿದೇ ಹೋದೆವು!" ಎಂದು ಡನ್ನೋ ಗೋಳಾಡುತ್ತಾ ಒಂದು ಬೆಂಚಿನ ಕೆಳಗೆ ಧುಮುಕಿದನು.

"ಅಲ್ಲಿಂದ ಹೊರಗೆ ಬಾ!" ಎಂದು ಡೂನೋ ಅವನಿಗೆ ಕೂಗಿದನು.

"ನಾನೇಕೆ ಬರಲಿ?"

"ನಾವು ಈಗ ಪ್ಯಾರಾಶೂಟ್‌ಗಳೊಂದಿಗೆ ಜಿಗಿಯಲಿದ್ದೇವೆ."


"ನಾನು ಇಲ್ಲಿಯೇ ಉಳಿಯಲು ಇಷ್ಟಪಡುತ್ತೇನೆ," ಎಂದು ಬೆಂಚಿನ ಕೆಳಗಿನಿಂದ ಡನ್ನೋ ಹೇಳಿದನು.
ಡೂನೋ ಅವನ ಕತ್ತಿನ ಹಿಂಭಾಗದ ಚರ್ಮವನ್ನು ಹಿಡಿದು ಅವನನ್ನು ಹೊರಗೆ ಎಳೆದುಕೊಂಡು ಬಂದನು.
"ನನ್ನನ್ನು ಮುಟ್ಟಬೇಡ!" ಎಂದು ಡನ್ನೋ ಕೂಗಿದನು. "ನಾನು ದೂರು ದಾಖಲಿಸುತ್ತೇನೆ!"
"ಕೂಗುವುದನ್ನು ನಿಲ್ಲಿಸು," ಎಂದು ಡೂನೋ ಶಾಂತವಾಗಿ ಹೇಳಿದನು. "ದಯವಿಟ್ಟು ಗಲಾಟೆ ಮಾಡಬೇಡ. ನಾನು ಹೇಗೆ ಜಿಗಿಯುತ್ತೇನೆಂಬುದನ್ನು ನೋಡು, ನಂತರ ಅದೇ ರೀತಿ ಮಾಡು."
ಅವನ ಶಾಂತವಾದ ಧ್ವನಿಯಿಂದ ಡನ್ನೋಗೆ ಸ್ವಲ್ಪ ಸಮಾಧಾನವಾಯಿತು.
ಡೂನೋ ಬುಟ್ಟಿಯ ಅಂಚಿಗೆ ಹೋದನು.
"ಎಲ್ಲರೂ ಗಮನ ಕೊಡಿ!" ಎಂದು ಅವನು ಹೇಳಿದನು. "ನನ್ನ ನಂತರ ನೀವು ಎಲ್ಲರೂ ಒಬ್ಬೊಬ್ಬರಾಗಿ ಜಿಗಿಯಬೇಕು. ಯಾರಾದರೂ ಹಿಂದೆ ಉಳಿದರೆ, ಬಲೂನು ಅವರನ್ನು ಗಾಳಿಯಲ್ಲಿ ಮೇಲಕ್ಕೆ ಒಯ್ಯುತ್ತದೆ. ನಿಮ್ಮ ಪ್ಯಾರಾಶೂಟ್‌ಗಳನ್ನು ಸಿದ್ಧಪಡಿಸಿಕೊಳ್ಳಿ. ಈಗ — ಜಿಗಿಯಿರಿ!"
ಡೂನೋ ಜಿಗಿದು ಕೆಳಕ್ಕೆ ತೇಲುತ್ತಾ ಹೋದನು. ನಂತರ ಸ್ವಿಫ್ಟಿ ಜಿಗಿದನು, ಆದರೆ ಅವನು ಕೆಳಕ್ಕೆ ತೇಲುತ್ತಾ ಹೋಗಲಿಲ್ಲ. ಜಿಗಿದು ನಂತರ ಪ್ಯಾರಾಶೂಟ್ ತೆರೆಯುವ ಬದಲು, ಅವನು ಮೊದಲು ಪ್ಯಾರಾಶೂಟ್ ತೆರೆದು ನಂತರ ಜಿಗಿದನು. ಪ್ಯಾರಾಶೂಟ್ ಬುಟ್ಟಿಯ ಬದಿಗೆ ಸಿಕ್ಕಿಕೊಂಡಿತು, ಸ್ವಿಫ್ಟಿಯ ಕಾಲು ಹಗ್ಗಗಳಲ್ಲಿ ಸಿಕ್ಕಿಹಾಕಿಕೊಂಡು ಅವನು ಗಾಳಿಯಲ್ಲಿ ತಲೆಕೆಳಗಾಗಿ ನೇತಾಡತೊಡಗಿದನು. ಮೀನು ಹಿಡಿಯುವ ಗಾಳಕ್ಕೆ ಸಿಕ್ಕ ಹುಳುವಿನಂತೆ ಅವನು ಕಾಲುಗಳನ್ನು ಒದೆಯುತ್ತಾ, ದೇಹವನ್ನು ತಿರುಚುತ್ತಾ ಒದ್ದಾಡಿದನು, ಆದರೆ ಪ್ಯಾರಾಶೂಟ್ ಬಿಡಿಸಿಕೊಳ್ಳಲಿಲ್ಲ.
"ಅಯ್ಯೋ ದೇವರೇ, ಪ್ಯಾರಾಶೂಟ್ ಬಿಡಿಸಿಕೊಂಡರೆ ಸ್ವಿಫ್ಟಿ ತಲೆಯ ಮೇಲೆ ಬೀಳುತ್ತಾನೆ!" ಎಂದು ಡಾ. ಪಿಲ್ ಮನ್ ಉದ್ಗರಿಸಿದನು.
ಮೈಟ್ಸಗಳು ತಕ್ಷಣವೇ ಪ್ಯಾರಾಶೂಟ್‌ನ ಹಗ್ಗಗಳನ್ನು ಹಿಡಿದು ಸ್ವಿಫ್ಟಿಯನ್ನು ಮತ್ತೆ ಬುಟ್ಟಿಯೊಳಗೆ ಎಳೆದುಕೊಂಡರು.
ಬಲೂನು ಮತ್ತೆ ಮೇಲಕ್ಕೆ ಏರುತ್ತಿರುವುದನ್ನು ಡನ್ನೋ ಗಮನಿಸಿದನು.
"ನೋಡಿ! ಬೇರೆ ಯಾರೂ ಜಿಗಿಯಬೇಕಾಗಿಲ್ಲ!" ಎಂದು ಅವನು ಹೇಳಿದನು. "ಬಲೂನು ಕೆಳಗೆ ಬೀಳುವುದನ್ನು ನಿಲ್ಲಿಸಿದೆ!"





"ಅದು ಏಕೆ?" ಎಂದು ಪರಹ್ಯಾಪ್ಸ ಆಶ್ಚರ್ಯದಿಂದ ಕೇಳಿದನು.
"ಡೂನೋ ಹೊರಗೆ ಹಾರಿಬಿಟ್ಟನು ಮತ್ತು ಬಲೂನು ಹಗುರವಾಗಿದೆ, ಅದು ನಿನಗೆ ಅರ್ಥವಾಗುವುದಿಲ್ಲವೇ, ಮೂರ್ಖ?" ಎಂದು ಗ್ರಂಪ್ಸ್ ಹೇಳಿದನು.
ಪರಹ್ಯಾಪ್ಸ ತನ್ನ ಭುಜಗಳನ್ನು ಸ್ವಲ್ಪ ಕೊಡವಿದನು.
"ಮನೆಗೆ ನಡೆದುಕೊಂಡೇ ಹೋಗುತ್ತೇನೆ," ಪರಹ್ಯಾಪ್ಸ ಎಂದನು.
"ಮತ್ತೆ ಡೂನೋ ಇಲ್ಲದೆ ನಾವು ಏನು ಮಾಡಬಹುದು?"
"ಛೇ! ಡೂನೋ ಇಲ್ಲದೆ ನಾವು ಮುಂದುವರಿಯಲು ಸಾಧ್ಯವಿಲ್ಲವೇನೋ!" ಎಂದು ಡನ್ನೋ ಕೇಳಿದನು.
"ನಮಗೆ ಏನು ಮಾಡಬೇಕೆಂದು ಹೇಳಲು ಯಾರಾದರೂ ಬೇಕು," ಎಂದು ರೋಲಿ-ಪೋಲಿ ಹೇಳಿದನು.
"ಇನ್ನು ಮುಂದೆ ಏನು ಮಾಡಬೇಕೆಂದು ನಾನು ನಿಮಗೆ ಹೇಳುತ್ತೇನೆ," ಎಂದು ಡನ್ನೋ ಘೋಷಿಸಿದನು. "ಇನ್ನು ಮುಂದೆ ನಾನೇ ಜವಾಬ್ದಾರಿ ವಹಿಸುತ್ತೇನೆ."





"ನೀನೇ!" ಎಂದು ಗ್ರಂಪ್ಸ್ ಆಶ್ಚರ್ಯದಿಂದ ಹೇಳಿದನು.
"ನಿನ್ನಂಥ ತಲೆ ಇರುವವನು ಮುಂದಾಳಾಗಬಹುದೇ?"
"ನನ್ನ ತಲೆಗೆ ಏನಾಗಿದೆ?" ಎಂದು ಡನ್ನೋ ಕೇಳಿದ. "ನಿನಗೆ ನನ್ನ ತಲೆ ಇಷ್ಟವಿಲ್ಲದಿದ್ದರೆ, ಹೊರಗೆ ಹಾರಿ ಡೂನೋನನ್ನು ಸೇರಿಕೊಳ್ಳಬಹುದು."
ಗ್ರಂಪ್ಸ್ ಅಂಚಿನ ಮೇಲೆ ನೋಟ ಹರಿಸಿದನು.
"ನಾನು ಅವನನ್ನು ಹೇಗೆ ಹುಡುಕಲಿ?" ಎಂದು ಅವನು ಕೇಳಿದನು. "ನಾವೀಗ ಬಹಳ ದೂರ ಬಂದಿದ್ದೇವೆ. ಅವನು ಹಾರಿದಾಗಲೇ ನಾವೂ ಹಾರಬೇಕಿತ್ತು."
"ಈಗ ಹಾರು. ಮುಂದೆ ಹೋಗಿ ಹಾರು."
ಗ್ರಂಪ್ಸ್ ಮತ್ತು ಡನ್ನೋ ಜಗಳವಾಡಲು ಆರಂಭಿಸಿದರು. ಅವರನ್ನು ತಡೆಯಲು ಡೂನೋ ಇರಲಿಲ್ಲವಾದ್ದರಿಂದ, ಆ ಜಗಳ ಸಂಜೆಯವರೆಗೂ ಮುಂದುವರಿಯುತ್ತಲೇ ಹೋಯಿತು. ಸೂರ್ಯ ಮುಳುಗಿದನು. ಗಾಳಿ ಜೋರಾಯಿತು. ಬಲೂನಿನ ಒಳಗಿನ ಗಾಳಿ ಇನ್ನಷ್ಟು ತಣ್ಣಗಾಗುತ್ತಾ ಹೋಯಿತು. ಬಲೂನು ಮತ್ತೆ ಕೆಳಕ್ಕೆ ಇಳಿಯತೊಡಗಿತು, ಆದರೆ ಗ್ರಂಪ್ಸ್ ಮತ್ತು ಡನ್ನೋ ಜಗಳವಾಡುವುದನ್ನು ಮುಂದುವರಿಸಿದರು.
"ಇದೆಲ್ಲ ಸಾಕು," ಎಂದು ಟ್ರಿಕ್ಲಿಸ್ವೀಟರ್ ಡನ್ನೋಗೆ ಹೇಳಿದನು. "ನೀನೇ ಜವಾಬ್ದಾರಿಯಲ್ಲಿದ್ದರೆ, ಏನು ಮಾಡಬೇಕೆಂದು ನಮಗೆ ಹೇಳು. ಬಲೂನು ಮತ್ತೆ ಕೆಳಗೆ ಬೀಳುತ್ತಿದೆ."
"ಇನ್ನೊಂದು ನಿಮಿಷದಲ್ಲಿ ಹೇಳುತ್ತೇನೆ," ಎಂದು ಡನ್ನೋ ಹೇಳಿದನು.
ಅವನು ಒಂದು ಬೆಂಚಿನ ಮೇಲೆ ಕುಳಿತು, ಒಂದು ಬೆರಳನ್ನು ತನ್ನ ಹಣೆಗಿಟ್ಟುಕೊಂಡು ಯೋಚಿಸಲು ಆರಂಭಿಸಿದನು. ಅಷ್ಟರಲ್ಲಿ ಬಲೂನು ಹಿಂದೆಂದಿಗಿಂತಲೂ ಹೆಚ್ಚು ವೇಗದಿಂದ ಕೆಳಕ್ಕೆ ಇಳಿಯತೊಡಗಿತು.

“ಇದರಲ್ಲಿ ಯೋಚಿಸುವಂತಹದೇನಿದೆ?" ಎಂದು ಬೆಂಡಮ್ ಕೇಳಿದನು. “ನಮ್ಮ ಬಳಿ ಇನ್ನೂ ಕೆಲವು ಮರಳಿನ ಚೀಲಗಳಿದ್ದರೆ, ಅವುಗಳನ್ನು ಹೊರಗೆ ಎಸೆಯಬಹುದಿತ್ತು.”
"ಹೌದು, ಸರಿಯೇ," ಎಂದು ಡನ್ನೋ ಹೇಳಿದನು, ಆ ಯೋಚನೆಯನ್ನು ತಕ್ಷಣವೇ ಬಿಟ್ಟುಕೊಟ್ಟು “ಆದರೆ ನಮ್ಮ ಬಳಿ ಇನ್ನೂ ಮರಳಿನ ಚೀಲಗಳಿಲ್ಲವಾದ್ದರಿಂದ, ನಿಮ್ಮಲ್ಲಿಯ ಒಬ್ಬನನ್ನು ಹೊರಗೆ ಎಸೆಯಬೇಕಾಗುತ್ತದೆ. ಆಗ ಬಲೂನು ಮತ್ತೆ ಗಾಳಿಯಲ್ಲಿ ಮೇಲಕ್ಕೆ ಹೋಗುತ್ತದೆ.”
"ಯಾರನ್ನು ಹೊರಗೆ ಎಸೆಯಬೇಕು?"
"ನನಗೆ ಗೊತ್ತಿಲ್ಲ," ಎಂದು ಡನ್ನೋ ಗಂಭೀರವಾಗಿ ಯೋಚಿಸುತ್ತಾ ಹೇಳಿದನು. “ಯಾರು ಹೆಚ್ಚು ಗೊಣಗುತ್ತಾರೋ ಅವರನ್ನು ಹೊರಗೆ ಎಸೆಯೋಣ.”
"ಆದರೆ ಹೊರಗೆ ಬೀಳಲು ನನಗೆ ಇಷ್ಟವಿಲ್ಲದಿದ್ದರೆ?" ಎಂದು ಗ್ರಂಪ್ಸ್ ಕೇಳಿದನು. “ಹೆಚ್ಚು ಗೊಣಗುವವನನ್ನೇ ಹೊರಗೆ ಎಸೆಯಬೇಕು ಎಂದು ಯಾವ ನಿಯಮವೂ ಇಲ್ಲ. ಹೆಚ್ಚು ತೂಕ ಇರುವವನನ್ನು ಹೊರಗೆ ಎಸೆಯೋಣ.”
"ಅದು ಒಳ್ಳೆಯ ಯೋಚನೆ," ಎಂದು ಡನ್ನೋ ಹೇಳಿದನು, "ರೋಲಿ-ಪೋಲಿಯನ್ನು ಹೊರಗೆ ಎಸೆಯೋಣ. ಅವನೇ ದಪ್ಪನಿದ್ದಾನೆ.”
"ಖಂಡಿತ, ಸರಿಯೇ," ಎಂದು ಟ್ರಿಕ್ಲಿ-ಸ್ವೀಟರ್ ಹೇಳಿದನು.
"ಏನು?" ಎಂದು ರೋಲಿ-ಪೋಲಿ ಕೂಗಿದನು. ”ನಾನೇ ದಪ್ಪನಾ? ಟ್ರಿಕ್ಲಿ-ಸ್ವೀಟರ್ ನನಗಿಂತ ದಪ್ಪಾಗಿದ್ದಾನೆ!”
"ನಾನು ಅವನಿಗಿಂತ ಹೆಚ್ಚು ದಪ್ಪನಾ?" ಎಂದು ಟ್ರಿಕ್ಲಿ-ಸ್ವೀಟರ್ ನಗುತ್ತಾ, ರೋಲಿ-ಪೋಲಿಯ ಕಡೆ ಬೆರಳು ತೋರಿಸಿದನು. “ಎಲ್ಲರೂ ಒಮ್ಮೆ ನೋಡಿ. ನೋಡಿ. ಹಾ, ಹಾ! ಯಾರು ದಪ್ಪರೆಂದು ನಿಮಗೆ ಕಾಣದಿದ್ದರೆ, ನಮ್ಮ ಹೊಟ್ಟೆಯ ಅಳತೆ ಮಾಡಿ ನೋಡಿ.”



"ನಮ್ಮ ಹೊಟ್ಟೆಯ ಅಳತೆ ಮಾಡಿ," ಎಂದು ರೋಲಿ-ಪೋಲಿ ಹೋರಾಟದ ಕೋಳಿಯಂತೆ ಟ್ರಿಕ್ಲಿ-ಸ್ವೀಟರ್‌ನ ಬಳಿಗೆ ಹಾರಿ ಹೋಗುತ್ತಾ ಹೇಳಿದನು. ಡನ್ನೋ ತನ್ನ ಜೇಬಿನಿಂದ ಒಂದು ದಾರದ ತುಂಡನ್ನು ತೆಗೆದು ರೋಲಿ-ಪೋಲಿಯ ಹೊಟ್ಟೆ ಸುತ್ತ ಸುತ್ತಿದನು. ನಂತರ ಅದನ್ನು ಟ್ರಿಕ್ಲಿ-ಸ್ವೀಟರ್‌ನ ಸೊಂಟದ ಸುತ್ತ ಹಾಕಿದಾಗ, ಟ್ರಿಕ್ಲಿ-ಸ್ವೀಟರ್ ರೋಲಿ-ಪೋಲಿಗಿಂತ ದಪ್ಪವಾಗಿದ್ದಾನೆಂದು ತಿಳಿಯಿತು.

"ನಾನು ಇದನ್ನು ನಂಬುವುದಿಲ್ಲ!" ಎಂದು ಟ್ರಿಕ್ಲಿ-ಸ್ವೀಟರ್ ಕೂಗಿದನು. "ರೋಲಿ-ಪೋಲಿಯ ಅಳತೆ ಸರಿಯಾಗಿ ಮಾಡಿಲ್ಲ. ಅವನು ಆಗ ತನ್ನ ಹೊಟ್ಟೆಯನ್ನು ಒಳಗೆಳೆದುಕೊಂಡಿದ್ದನು— ನಾನು ಅದನ್ನು ನೋಡಿದೆ!"

"ನಾನು ಹಾಗೆ ಮಾಡಲಿಲ್ಲ!" ಎಂದು ರೋಲಿ-ಪೋಲಿ ಕೂಗಿದನು.

"ನೀನು ಹಾಗೆ ಮಾಡಿರುವೆ. ನಾನು ನೋಡಿದ್ದೇನೆ. ಮತ್ತೆ ಎಲ್ಲರ ಅಳತೆ ಮಾಡೋಣ."

ಡನ್ನೋ ರೋಲಿ-ಪೋಲಿಯನ್ನು ಅಳತೆ ಮಾಡುತ್ತಿರುವಾಗ, ಟ್ರಿಕ್ಲಿ-ಸ್ವೀಟರ್ ಅವನ ಸುತ್ತಲೂ ಕುಣಿಯುತ್ತಾ ಹೀಗೆ ಹೇಳುತ್ತಿದ್ದನು:

"ಬಾ, ಬಾ, ಈಗ ಹಾಗೆ ಮಾಡಬೇಡ! ನಿನ್ನನ್ನು ಉಬ್ಬಿಸಿಕೋ."

"ನಾನು ನನ್ನನ್ನು ಏಕೆ ಉಬ್ಬಿಸಿಕೊಳ್ಳಬೇಕು?" ಎಂದು ರೋಲಿ-ಪೋಲಿ ಹೇಳಿದ. 'ಖಂಡಿತವಾಗಿಯೂ, ನಾನು ನನ್ನನ್ನು ಉಬ್ಬಿಸಿಕೊಂಡರೆ ನಿನಗಿಂತ ದಪ್ಪವಾಗಿರುತ್ತೇನೆ."

"ಸರಿ, ನಿನ್ನ ಹೊಟ್ಟೆಯನ್ನು ಉಬ್ಬಿಸಬೇಡ ಮತ್ತು ಉಸಿರು ಬಿಗಿಹಿಡಿದು ತಗ್ಗಿಸಲು ಬೇಡ. ನಿನ್ನನ್ನು ನೀನೇ ತಡೆಹಿಡಿಯುವ ಹಕ್ಕು ನಿನಗಿಲ್ಲ. ಇವನು ಏನು ಮಾಡುತ್ತಿದ್ದಾನೆ ನೋಡಿ, ಎಲ್ಲರೂ!"

"ಇದು ನ್ಯಾಯವಲ್ಲ! ಇವನು ಮೋಸಗಾರ!"

ರೋಲಿ-ಪೋಲಿಯ ಸರಿಯಾದ ಅಳತೆಯನ್ನು ಡನ್ನೋ ತೆಗೆದುಕೊಂಡ ನಂತರ, ಟ್ರಿಕ್ಲಿ ಸ್ವೀಟರ್‌ನನ್ನೂ ಅಷ್ಟೇ ಸರಿಯಾಗಿ ಅಳೆದನು, ಮತ್ತು ಈ ಬಾರಿ ಅವರಿಬ್ಬರೂ ಒಂದೇ ಗಾತ್ರದವರು ಎಂದು ತಿಳಿಯಿತು.

"ನಾವು ಅವರಿಬ್ಬರನ್ನೂ ಹೊರಗೆ ಎಸೆಯಬೇಕಾಗುತ್ತದೆ," ಎಂದು ಡನ್ನೋ ನಿಟ್ಟುಸಿರು ಬಿಡುತ್ತಾ ಹೇಳಿದನು.

"ಆದರೆ ಒಬ್ಬನು ಸಾಕಾಗುವಾಗ ಇಬ್ಬರನ್ನೇಕೆ?" ಎಂದು ಟ್ರಿಕ್ಲಿಸ್ವೀಟರ್ ಕೇಳಿದನು.

ಬೇಟೆಗಾರ ಶಾಟ್ ಕೆಳಗೆ ನೋಡಿದಾಗ, ಭೂಮಿಯು ಅವರ ಕಡೆಗೆ ಬಹಳ ವೇಗವಾಗಿ ಮೇಲಕ್ಕೆ ಬರುತ್ತಿರುವುದು ಕಾಣಿಸಿತು.

"ನಾವು ಅಪ್ಪಳಿಸುವ ಮೊದಲು ಬೇಗ ನಿರ್ಧರಿಸು, ಡನ್ನೋ," ಎಂದು ಅವನು ಹೇಳಿದನು.

"ಯಾರನ್ನು ಹೊರಗೆ ಎಸೆಯಬೇಕೆಂದು ನಾವು ಎಣಿಸಿ ತೀರ್ಮಾನಿಸಬೇಕಾಗುತ್ತದೆ," ಎಂದು ಪರಹ್ಯಾಪ್ಸ ಹೇಳಿದನು.

"ಅದು ಸರಿ," ಎಂದು ಟ್ರಿಕ್ಲಿಸ್ವೀಟರ್ ಹೇಳಿದನು, "ಆದರೆ ಯಾರ ಭಾವನೆಗಳಿಗೂ ನೋವಾಗದಂತೆ, ದಪ್ಪವಿದ್ದವರನ್ನೂ ತೆಳ್ಳನೆಯವರನ್ನೂ ಸಮಾನವಾಗಿ ಎಲ್ಲರನ್ನೂ ಎಣಿಸಬೇಕು."



"ಸರಿ," ಡನ್ನೋ ಹೇಳಿದ, "ನಾನು ಎಣಿಸುತ್ತೇನೆ.'
ಅವರೆಲ್ಲರೂ ಒಂದು ವೃತ್ತದಲ್ಲಿ ನಿಂತರು, ಮತ್ತು ಡನ್ನೋ ಎಣಿಸಲು ಪ್ರಾರಂಭಿಸಿದ. ಅವನು ಒಬ್ಬೊಬ್ಬರನ್ನಾಗಿ ತನ್ನ ಬೆರಳಿನಿಂದ ಮುಟ್ಟುತ್ತಾ ಎಣಿಸಿದ:

ಎನಿ ಬೆನಿ ಬೆಸ್,
ಟಿಕಲ್ ಟ್ಯಾಕಲ್ ಟೆಸ್,
ಎನಿ ಬೆನಿ ಬೀನಿ,
ಟಿಕಲ್ ಟ್ಯಾಕಲ್ ಟೀನಿ...


ನಂತರ ಅವನು ಹೇಳಿದ:
"ಅದು ನನಗೆ ಇಷ್ಟವಾಗಲಿಲ್ಲ; ಇಲ್ಲಿ, ನಾನು ಮತ್ತೆ ಮೊದಲಿನಿಂದ ಎಣಿಸುತ್ತೇನೆ:

ಇಕ್ಕಿಟಿ ಪಿಕಿಟಿ ರಿಕಿಲಿ ಲೀ,
ಏಬಲ್ ಫೇಬಲ್, ಟೀ ಮಾಡು ನೀ,
ಇಕ್ಕಿ, ಪಿಕ್ಕಿ, ಬಿಸಿ ಮತ್ತು ಅಂಟು...

ಆದರೆ ಅದೇ ಕ್ಷಣದಲ್ಲಿ ಬುಟ್ಟಿ ನೆಲಕ್ಕೆ ಬಡಿದು ಉರುಳಿಬಿತ್ತು. ಪರಹ್ಯಾಪ್ಸ ಪ್ರಾಬ್ಲಿಯ ಕೈಯನ್ನು ಹಿಡಿದುಕೊಂಡಿದ್ದರಿಂದ, ಅವರಿಬ್ಬರೂ ಒಟ್ಟಿಗೆ ಹೊರಗೆ ಬಿದ್ದರು. ಉಳಿದ ಎಲ್ಲಾ ಮೈಟ್ಸ ಗಳು ದುಂಡು ಕಲ್ಲುಗಳಂತೆ ಉರುಳಿಬಿದ್ದರು — ಅಂದರೆ, ಡನ್ನೋನನ್ನು ಹೊರತುಪಡಿಸಿ ಎಲ್ಲರೂ. ಡನ್ನೋ ಬುಟ್ಟಿಯ ಅಂಚನ್ನು ಬಿಗಿಯಾಗಿ ಹಿಡಿದುಕೊಂಡಿದ್ದನು, ಮತ್ತು ಡಾಟ್ ತನ್ನ ಹಲ್ಲುಗಳಿಂದ ಡನ್ನೋನ ಪ್ಯಾಂಟ್‌ನ್ನು ಗಟ್ಟಿಯಾಗಿ ಹಿಡಿದಿತ್ತು. ಬಲೂನು ನೆಲಕ್ಕೆ ಬಡಿದಾಗ ಚೆಂಡಿನಂತೆ ಮತ್ತೆ ಮೇಲಕ್ಕೆ ಚಿಮ್ಮಿತು; ಅದರೊಂದಿಗೆ ಬುಟ್ಟಿಯನ್ನೂ ಮೇಲಕ್ಕೆತ್ತಿತು. ನಂತರ ಅದು ನಿಧಾನವಾಗಿ ಕೆಳಗೆ ಇಳಿಯುತ್ತಾ, ಬುಟ್ಟಿಯನ್ನು ತನ್ನ ಹಿಂದೆ ನೆಲದ ಮೇಲೆ ಎಳೆದುಕೊಂಡು ಸಾಗಿತು.







ಇಷ್ಟರಲ್ಲಿ ಬಲೂನು ಯಾವುದೋ ಗಟ್ಟಿಯಾದ ವಸ್ತುವಿಗೆ ಬಡಿದು, ಜೋರಾದ ಶಬ್ದದೊಂದಿಗೆ ಸಿಡಿದುಹೋಯಿತು. ಡಾಟ್ ಗಾಳಿಯಲ್ಲಿ ಪಲ್ಟಿ ಹೊಡೆದು, ಕೂಗುತ್ತಾ ಓಡಿಹೋಯಿತು. ಡನ್ನೋ ಬುಟ್ಟಿಯಿಂದ ಕೆಳಗೆ ಬಿದ್ದು, ನೆಲದ ಮೇಲೆ ಚಲನೆಯಿಲ್ಲದೆ ಬಿದ್ದನು.

ಅಷ್ಟಕ್ಕೇ ಈ ಅಪಘಾತದಿಂದಾಗಿ ಬಲೂನು ಪ್ರವಾಸವೂ ಮುಗಿದುಹೋಯಿತು.







ISBN 5-05-000670-8
ISBN 5-05-000671-6

